ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಹೊಸದುರ್ಗ

**ಸಿ.ಸಿ.33/2023**

| | | |
|---|---|---|
| ಸಾಕ್ಷಿದಾರರ ಹೆಸರು : | ಅರುಣ್ ಕುಮಾರ್ | ಪ್ರಮಾಣ ವಚನ ಬೋಧಿಸಿದ ದಿನಾಂಕ: 13.**03.2026** |
| ತಂದೆಯ ಹೆಸರು : | ಚಿದಾನಂದ | |
| ವಯಸ್ಸು : | 33 ವರ್ಷ | **ಪಿ.ಡಬ್ಲ್ಯೂ-05** |
| ಉದ್ಯೋಗ : | ವ್ಯವಸಾಯ | **ಸಿ.ಡಬ್ಲ್ಯೂ-02** |
| ವಾಸ ಸ್ಥಳ : | ಬೋಚೇನಹಳ್ಳಿ | |

**-:ಮುಖ್ಯ ವಿಚಾರಣೆ : ಮಾನ್ಯ ಸ.ಸ.ಅಭಿಯೋಜಕರವರಿಂದ :-**

ಚಾಸಾ 1 ಮತ್ತು 3 ಪರಿಚಯ. ಸಾಕ್ಷಿ ಗುನ್ಯಸ್ಥಳ ಪಂಚನಾಮೆ ಮತ್ತು ಕಚ್ಚಾನಕಾಶೆಯಲ್ಲಿ ತಾನು ಸಹಿ ಮಾಡಿರುವುದಾಗಿ ನೋಡಿ ಗುರುತಿಸಿದ್ದು, ಸದರಿ ಪಂಚನಾಮೆ ಮತ್ತು ಕಚ್ಚಾನಕಾಶೆಯನ್ನು ಈಗಾಗಲೇ ನಿಪಿಃ 3 ಮತ್ತು 4 ಎಂದು ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿಃ 3(ಸಿ) ಮತ್ತು 4(ಸಿ) ಎಂದು ಗುರುತಿಸಲಾಯಿತು. ದಿಃ 02.07.2021 ರಂದು ಬೋಚೇನಹಳ್ಳಿ ಗ್ರಾಮದ ಅರಳೀಕಟ್ಟೆಯ ಹತ್ತಿರ ಆರೋಪಿಗಳು ಮತ್ತು ಚಾಸಾ 01 ರವರ ಮಧ್ಯೆ ಗಲಾಟ ಆಗಿದ್ದರ ವಿಚಾರವಾಗಿ ಪೊಲೀಸರು ಪಂಚನಾಮೆಗೆ ಬಂದಿದ್ದರಿಂದ ನಾನು ನಿಪಿಃ 3 ಮತ್ತು 4 ಕ್ಕೆ ಸಹಿ ಮಾಡಿರುತ್ತೇನೆ. ಪೊಲೀಸರಿಗೆ ಸ್ಥಳ ಚಾಸಾ 1 ತೋರಿಸಿರುತ್ತಾರೆ. ಆ ಸಮಯದಲ್ಲಿ ನನ್ನ ಜೊತೆ ಚಾಸಾ 3 ಇದ್ದ. ಮಧ್ಯಾಹ್ನ 3-00 ಗಂಟೆಯಿಂದ 4-00 ಗಂಟೆಯವರೆಗೆ ಪಂಚನಾಮೆಯನ್ನು ಮಾಡಿ ಒಂದು ಕಲ್ಲು ಮತ್ತು ಒಂದು ಕೋಲನ್ನು ಅಮಾನತ್ತು ಪಡಿಸಿಕೊಂಡಿರುತ್ತಾರೆ. ಸಾಕ್ಷಿ ನ್ಯಾಯಾಲಯದಲ್ಲಿರುವ ಕೋಲು ಮತ್ತು ಕಲ್ಲನ್ನು ನೋಡಿ ಗುರುತಿಸಿದ್ದು, ಅವುಗಳನ್ನು ಈಗಾಗಲೇ ಮುದ್ದೇ ಮಾಲು 1 ಮತ್ತು 2 ಎಂದು ಗುರುತಿಸಲಾಗಿದೆ.

<u>ಪಾಟೀ ಸವಾಲು ಆರೋಪಿಗಳ ಪರಃ ಶ್ರೀ ಡಿ.ಎನ್.ಎಂ. ವಕೀಲರಿಂದ .</u>

ಚಾಸಾ 1 ಮತ್ತು ನಾವು ಅಣ್ಣತಮ್ಮಂದಿರು ಎನ್ನುವುದು ನಿಜ. ಚಾಸಾ 5 ನನ್ನ ತಂದೆ ಎನ್ನುವುದು ನಿಜ. ಪೊಲೀಸರು ಬಂದಾಗ ನಾನು ಅಲ್ಲೇ ಅರಳೀಕಟ್ಟೆಯಲ್ಲಿ ಇದ್ದೆ. ಆ ಸಮಯದಲ್ಲಿ ನಾನು ಮತ್ತು ಚಾಸಾ 3 ಮಾತ್ರ ಇದ್ದೆವು. ಚಾಸಾ 3 ಚಾಸಾ 1 ರವರ ಅಣ್ಣನ ಮಗ ಎಂದರೆ ಸಾಕ್ಷಿ ಅಣ್ಣತಮ್ಮಂದಿರು ಎಂದು ಹೇಳುತ್ತಾರೆ. ಪಂಚನಾಮೆಯನ್ನು ನಾನು ಓದಿಲ್ಲ ಪೊಲೀಸರು ಓದಿ ಹೇಳಿದ ನಂತರ ನಾನು ಸಹಿಯನ್ನು ಮಾಡಿರುತ್ತೇನೆ.

ಪಂಚನಾಮೆ ಮಾಡಿದ ಪೊಲೀಸರ ಹೆಸರು ಗೊತ್ತಿರುವುದಿಲ್ಲ. ಪಂಚನಾಮೆ ಮಾಡಿದ ಸ್ಥಳದ ದಕ್ಷಿಣಕ್ಕೆ ಅರಳೀಕಟ್ಟೆ ಇರುತ್ತದೆ. ಪಂಚನಾಮೆಯಲ್ಲಿ ಯಾವ ಚೆಕ್ಕುಬಂದಿಯನ್ನು ಬರೆದಿರುತ್ತಾರೆ ಎಂದರೆ ಸಾಕ್ಷಿ ಪೂರ್ವಕ್ಕೆ ಮಹೇಶ್ವರ ಇವರ ಮನೆ, ಪಶ್ಚಿಮಕ್ಕೆ ರಾಮಚಂದ್ರಪ್ಪನವರ ಮನೆ, ಉತ್ತರಕ್ಕೆ ರಸ್ತೆ, ದಕ್ಷಿಣಕ್ಕೆ ಅರಳೀಕಟ್ಟೆ ಇರುತ್ತದೆ. ಮುದ್ದೆ ಮಾಲು 1 ಮತ್ತು 2 ರ ತರಹ ಕೋಲು ಮತ್ತು ಕಲ್ಲು ಸಾಮಾನ್ಯವಾಗಿ ಎಲ್ಲಾ ಕಡೆ ಸಿಗುತ್ತವೆ ಎನ್ನುವುದು ನಿಜ . ಪೊಲೀಸರು ನನ್ನ ಸಮಕ್ಷಮ ಕೋಲನ್ನು ಅಳತೆ ಮಾಡಿಲ್ಲ. ನಮ್ಮ ಸಹಿಯುಳ್ಳ ಚೀಟಿಯನ್ನು ನಮ್ಮ ಸಮಕ್ಷಮ ಮುದ್ದೆ ಮಾಲುಗಳ ಮೇಲೆ ಅಂಟಿಸಿಲ್ಲ. ಪೊಲೀಸರು ನನ್ನ ಸಮಕ್ಷಮ ಸ್ಥಳದಿಂದ ಯಾವುದೇ ವಸ್ತುಗಳನ್ನು ಅಮಾನತ್ತು ಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ಪೊಲೀಸರು ಸ್ಥಳಕ್ಕೆ ಬಂದು ಪಂಚನಾಮೆಯನ್ನು ಮಾಡಿ ಕಚ್ಚಾನಕಾಶೆಯನ್ನು ತಯಾರು ಮಾಡಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು, ನನ್ನ ತಂದೆ ಮತ್ತು ಚಾಸಾ 1 ಸೇರಿ ಪೊಲೀಸ್ ಠಾಣೆಯಲ್ಲಿ ಈ ದಾಖಲೆಗಳನ್ನು ತಯಾರಿಗೆ ಅಲ್ಲೇ ಸಹಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ಆರೋಪಿಗಳು ಮತ್ತು ಚಾಸಾ 1 ರವರು ನಿವೇಶನಕ್ಕೆ ಸಂಬಂಧಪಟ್ಟಂತೆ ಮೊದಲಿನಿಂದಲೂ ಜಗಳ ಇರುತ್ತದೆ ಎಂದರೆ ಸರಿಯಲ್ಲ. ಆ ರೀತಿ ಮೊದಲಿನಿಂದಲೂ ಗಲಾಟೆ ಇದ್ದರು ಸಹ ನಾನು ಚಾಸಾ 1 ರವರು ಅಣ್ಣತಮ್ಮಂದಿರು ಆಗಬೇಕಾದ ಕಾರಣ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರುವಿಚಾರಣೆ: ಇಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚುಪಡಿಸಿದೆ)

ಓ.ಹೇ.ಕೇ.ಸ.ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಹೊಸದುರ್ಗ.